ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

೧೦ನೇ ವರ್ಷ ೯ನೇ ಸಂಚಿಕೆ ಬೆಲೆ ೬೦ ಪೈಸೆ

ಕೊಪ್ಪ ೩-೩-೧೯೯೧ ಭಾನುವಾರ ದೂರವಾಣಿ : ೧೧೪

ಅಸಮರ್ಪಕ ವಿದ್ಯುತ್ ಪೂರೈಕೆ : ಪ್ರತಿಭಟನಾ ಪತ್ರಗಳ ಪ್ರವಾಹ

ಕೊಪ್ಪ: ಒಂದು ವಾರದಿಂದ ವಿದ್ಯುಚ್ಛಕ್ತಿ ಪೂರೈಕೆ ದಿನನಿತ್ಯ ಅಸ್ತವ್ಯಸ್ತವಾಗಿರುವುದನ್ನು ಪ್ರತಿಭಟಿಸಿ ಹಾಗೂ ಕೂಡಲೇ ವಿದ್ಯುತ್ ಕಡಿತದ ಅವಧಿ ನಿಗದಿಪಡಿಸಿ ಅದನ್ನುಳಿದು ಬೇರೆ ಹೊತ್ತಿನಲ್ಲಿ ವಿದ್ಯುಚ್ಛಕ್ತಿ ನಿಲ್ಲಿಸಬಾರದೆಂದು ಒತ್ತಾಯಿಸಿ, ನೂರಾರು ಜನ ಸಹಿ ಮಾಡಿದ ಮನವಿ ಪತ್ರಗಳನ್ನು ವಿದ್ಯುಚ್ಛಕ್ತಿ ಮಂಡಳಿಯ ವಿವಿಧ ಅಧಿಕಾರಿಗಳು, ವಿದ್ಯುತ್ ಮಂತ್ರಿ ಮತ್ತು ಮುಖ್ಯಮಂತ್ರಿಗಳಿಗೂ ಕಳಿಸಲಾಗಿದೆ.

ಇದೇ ರೀತಿಯ ಪತ್ರಗಳನ್ನು ಸಾರ್ವಜನಿಕ ಹಿತರಕ್ಷಣಾ ಹೋರಾಟ ಸಮಿತಿ ಹಾಗೂ ನೂರಾರು ಜನ ಕಾಫಿ, ಅಡಿಕೆ ಬೆಳೆಗಾರರು ಪ್ರತ್ಯೇಕವಾಗಿ ಕಳಿಸಿದ್ದಾರೆ.

ಪ್ರಗತಿಪರ, ಮಾನವೀಯ ವಿಚಾರಗಳ ಬಳಗ

ದೈವ-ಧರ್ಮಗಳ ಹೆಸರಿನ ಶೋಷಣೆ, ದಬ್ಬಾಳಿಕೆಗಳನ್ನು, ಜಾತಿ ಮತಗಳ ದ್ವೇಷ ಮತ್ತು ತಾರತಮ್ಯವನ್ನು, ಮಹಿಳೆಯರ ಕುರಿತಾದ ಮತ್ತಿತರ ರೀತಿಯ ಅವೈಜ್ಞಾನಿಕ, ಅಮಾನವೀಯ ನಂಬಿಕೆ, ಮೌಲ್ಯಗಳನ್ನೊಪ್ಪದೆ, ಎಲ್ಲಾ ಧರ್ಮಗಳಿಗಿಂತ ಹೆಚ್ಚಾಗಿ ಮನುಷ್ಯ ಧರ್ಮವನ್ನೊಪ್ಪಿ ಪ್ರತಿಪಾದಿಸುವಂಥ ಸಮಾನ ಮನಸ್ಕರ ಬಳಗವೊಂದನ್ನು ಆರಂಭಿಸುವ ಸಲುವಾಗಿ ತಾ|| ೧೦-೩-೯೧ನೇ ಭಾನುವಾರ ಬೆಳಗ್ಗೆ ೧೦-೩೦ಕ್ಕೆ ಕೊಪ್ಪದ ಮಹಿಳಾ ಸಮಾಜದ ಪಕ್ಕದಲ್ಲಿರುವ ಟೌನ್ ಮಾಧ್ಯಮಿಕ ಶಾಲೆಯಲ್ಲಿ ಸಭೆ ಕರೆಯಲಾಗಿದೆ. ಇಂಥ ಪ್ರಗತಿಪರ ಮತ್ತು ಮಾನವೀಯ ವಿಚಾರಗಳುಳ್ಳ ಎಲ್ಲರೂ ತಪ್ಪದೆ ಭಾಗವಹಿಸಲು ಕೋರಲಾಗಿದೆ

ಬಸ್ಸಿಲ್ಲದೆ ಶಾಲೆಗೆ ನಡೆದು ನಡೆದು ಬಾಲಕನ ದುರ್ಮರಣ

ಬಸರಿಕಟ್ಟೆ : ಶಂಕರ್ ಸಾರಿಗೆ ಮುಷ್ಕರ ಮತ್ತು ಲಾಕೌಟ್‌ಗಳಿಂದುಂಟಾದ ಅಸಹನೀಯ ಪರಿಸ್ಥಿತಿಯು ಇಲ್ಲಿನ ಶಾಲಾ ಬಾಲಕನೊಬ್ಬನನ್ನು ಬಲಿ ತೆಗೆದುಕೊಂಡಿದೆ !

ಈ ಪ್ರದೇಶಕ್ಕೆ ಬಸ್‌ಗಳ ಸೌಕರ್ಯ ಏನೇನೂ ಇಲ್ಲವಾಗಿ, ಅಂಚೆ ಪತ್ರಗಳು ವಾರಕ್ಕೊಮ್ಮೆ ಮಾತ್ರ ಬರುವಂತಾದದ್ದಲ್ಲದೆ ಸಾವಿರಾರು ಶಾಲಾ ಮಕ್ಕಳು ಪರೀಕ್ಷೆಯ ಹತ್ತಿರದ ಈ ದಿನಗಳಲ್ಲಿ ದಿನಕ್ಕೆ ೧೫ರಿಂದ ೨೦ ಕಿ ಮೀ. ಗಳಿಗೂ ಹೆಚ್ಚು ದೂರ ನಡೆದೇ ತೀರಬೇಕಾಗಿದೆ

ಹೀಗೆ, ಫೆ ೨೭ರಂದು ಶಾಲೆಗೆ ಹೊರಟಿದ್ದ ಪ್ರಶಾಂತ್ ಎಂಬ ೧೪ ವರ್ಷದ, ೮ನೆ ತರಗತಿಯ ಬಾಲಕ ದಾರಿಯಲ್ಲೇ ಕುಸಿದು ಬಿದ್ದು ಪ್ರಾಣ ನೀಗಿದ ದುರಂತ ನಡೆದು ಹೋಯಿತು. ಕುಸಿದು ಬಿದ್ದ ಕೂಡಲೇ ಜೊತೆಯ ಮಕ್ಕಳಿಂದ ಸುದ್ದಿ ತಿಳಿದ ಪೋಷಕರು ಹೇಗೋ ಆತನನ್ನು ಜಯಪುರ ಆಸ್ಪತ್ರೆಗೆ ಸಾಗಿಸಿದರಾದರೂ ಆಗಲೇ ಪ್ರಾಣ ಪಕ್ಷಿ ಹಾರಿ ಹೋಗಿತ್ತು.

ಕೊಗ್ರೆ-ಕಲ್ಲುಗುಡ್ಡೆ ನಡುವಿನ ಸಂಪಾನೆಯ ವರ್ಧಮಾನಯ್ಯ ಎಂಬವರ ಮಗನಾದ ಪ್ರಶಾಂತನಿಗೆ ಸ್ವಲ್ಪ ಹೃದಯ ದೌರ್ಬಲ್ಯವಿತ್ತೆನ್ನಲಾಗಿದೆ. ಆದರೂ ಈತ ಪ್ರತಿದಿನ ೨೪ ಕಿ ಮೀ. ದೂರ ನಡೆಯಲೇಬೇಕಾಗಿತ್ತು.

ಈ ದುರಂತದಿಂದ ತತ್ತರಿಸಿರುವ ಶಾಲಾ ಬಾಲಕ ವೃಂದ, ಅಧ್ಯಾಪಕರು, ಪೋಷಕರು ಮತ್ತು ಸಾರ್ವಜನಿಕರು ಈ ಹತಾಶ ಸ್ಥಿತಿಯ ವಿರುದ್ಧ ತೀವ್ರ ಪ್ರತಿಭಟನೆಯ ಸಿದ್ಧತೆ ನಡೆಸಿದ್ದಾರೆನ್ನಲಾಗಿದೆ.

ಓದುಗರಲ್ಲಿ

ಚಂದಾ ಸಂಗ್ರಹಣೆಯ ತಿರುಗಾಟಕ್ಕಾಗಿ ತಾ|| ೧೦-೩-೯೧ರ ಪತ್ರಿಕೆಗೆ ರಜೆ ಕೊಡಲಾಗಿದೆ. ಚಂದಾದಾರರು, ಅದರಲ್ಲೂ ತುಂಬಾ ಹಳೇ ಬಾಕಿ ಇರುವವರು ಪೂರ್ತಿ ಚಂದಾ ಪಾವತಿಗೆ ಏರ್ಪಾಡು ಮಾಡಬೇಕಾಗಿ ಕೋರುತ್ತೇನೆ —ಸಂಪಾದಕ

ಆಕಾಶವಾಣಿ ಕ್ವಿಜ್ : ನಮ್ಮ ಅನಿಲ್‌ಗೆ ಮೊದಲ ಸ್ಥಾನ

ಹರಿಹರಪುರ : ಭದ್ರಾವತಿ ಆಕಾಶವಾಣಿ ಫೆ ೨೬ರಂದು ನಡೆಸಿದ ರಸಪ್ರಶ್ನೆ (ಕ್ವಿಜ್) ಸ್ಪರ್ಧೆಯಲ್ಲಿ ಇಲ್ಲಿನ ಕಿರಿಯ ಕಾಲೇಜಿನ ೨ನೇ ಪಿಯುಸಿ ವಿದ್ಯಾರ್ಥಿ ಕೆ ಎಸ್ ಅನಿಲ್ ಕುಮಾರ್ ಮೊದಲ ಬಹುಮಾನ ಗಳಿಸಿ ಶಾಲೆಗೆ, ಊರಿಗೆ ಕೀರ್ತಿಯನ್ನೂ, 'ಮುಂಜಾವು'ಗೆ ಹೆಮ್ಮೆಯನ್ನೂ ತಂದಿದ್ದಾನೆ

ಈ ಕಾರ್ಯಕ್ರಮ ಭದ್ರಾವತಿ ಆಕಾಶವಾಣಿಯಲ್ಲಿ ಮಾರ್ಚ್ ೬ನೇ ತಾರೀಖು ಬುಧವಾರ ರಾತ್ರಿ ೮ ೧೦ಕ್ಕೆ ಪ್ರಸಾರವಾಗಲಿದೆ.

ಕುದುರೆಮುಖ ಶಿಖರ ಆರೋಹಣ

'ಶೃಂಗೇರಿ ನೇಚರ್ ಅಡ್ವೆಂಚರ್ ಕ್ಲಬ್'ನ ವತಿಯಿಂದ ಇದೇ ಮಾರ್ಚ್ ತಿಂಗಳ ೧೫ರಿಂದ ೧೮ರವರೆಗೆ ಗ್ರಾಮೀಣ ಯುವಕ ಯುವತಿಯರಿಗಾಗಿ ಕುದುರೆಮುಖ ಶಿಖರ ಆರೋಹಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ಭಾಗವಹಿಸುವವರು ತಮ್ಮ ಆಹಾರದ ಖರ್ಚನ್ನು ಮಾತ್ರ ತಾವೇ ನೋಡಿಕೊಳ್ಳಬೇಕಾಗುವುದು, ಬಸ್ಸು ಛಾರ್ಜು ಹಾಗೂ ತರಬೇತಿಯ ಖರ್ಚನ್ನು 'ಸ್ನಾಕ್' ನೋಡಿಕೊಳ್ಳುವುದು.

ಕೇವಲ ೩೦ ಮಂದಿಗೆ ಮಾತ್ರ ಈ ಆರೋಹಣದಲ್ಲಿ ಭಾಗವಹಿಸಲು ಅವಕಾಶವಿದ್ದು ಆಸಕ್ತರು ಇದೇ ತಿಂಗಳ ೭ನೇ ತಾರೀಖಿನೊಳಗೆ ಡಾ| ಜಿ.ಕೆ. ಭಟ್, ಜೆಸಿಬಿಎಂ ಕಾಲೇಜು, ಶೃಂಗೇರಿ ಇವರನ್ನು ಸಂಪರ್ಕಿಸಲು ಕೋರಲಾಗಿದೆ.

ರಕ್ತದಾನಿಗಳ ಸಂಘ

ಕೊಪ್ಪ: ಇಲ್ಲಿನ ರೋಟರ್ಯಾಕ್ಟ್ ಕ್ಲಬ್ ಆಶ್ರಯದಲ್ಲಿ 'ರಕ್ತದಾನಿಗಳ ಸಂಘ'ವೊಂದು ಮಾ. ೧೪ರಂದು ಆರಂಭವಾಗಲಿದೆ. ತುರ್ತು ಅಗತ್ಯವಿರುವ ರೋಗಿಗಳಿಗೆ ರಕ್ತದಾನ ಮಾಡಲು ಸಿದ್ಧರಿರುವವರು ಅಂದು ಬೆಳಗ್ಗೆ ೯ರಿಂದ ಸಂಜೆ ೫ರವರೆಗೆ ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ತಮ್ಮ ರಕ್ತದ ಗುಂಪನ್ನು ಪರೀಕ್ಷೆ ಮಾಡಿಸಿ, ಸಂಘಕ್ಕೆ ಹೆಸರು ನೊಂದಾಯಿಸಬೇಕೆಂದು ಕೋರಲಾಗಿದೆ.

ಬ್ಯಾಂಕರ್ಸ್ ರಿ| ಕ್ಲಬ್ ವಾರ್ಷಿಕೋತ್ಸವ

ಕೊಪ್ಪ : ಇಲ್ಲಿನ ಬ್ಯಾಂಕರ್ಸ್ ರಿಕ್ರಿಯೇಶನ್ ಕ್ಲಬ್ಬಿನ ವಾರ್ಷಿಕೋತ್ಸವ ಮಾರ್ಚ್ ೯ರ ರಾತ್ರಿ ೭.೩೦ಕ್ಕೆ ಟೌನ್ ಮಾಧ್ಯಮಿಕ ಶಾಲೆಯ ಬಯಲಿನಲ್ಲಿ ನಡೆಯಲಿದೆ. ವಿವಿಧ ಮನರಂಜನಾ ಕಾರ್ಯಕ್ರಮಗಳ ಜೊತೆಗೆ ಒಂದು ಕನ್ನಡ ಮತ್ತು ಒಂದು ತುಳು ನಾಟಕಗಳಿವೆ. ಕ್ಲಬ್ ಅಧ್ಯಕ್ಷ ಬಿ. ಆರ್. ಪೂಜಾರಿಯವರು ಸಾರ್ವಜನಿಕರೆಲ್ಲರಿಗೂ ಆದರದ ಸ್ವಾಗತ ಕೋರಿದ್ದಾರೆ

ಉದಯಪ್ರಕಾಶ್-ಸುಧೀರ್: ಜಿಲ್ಲಾ ಶಟ್ಲ್ ಪ್ರಶಸ್ತಿ

ಕೊಪ್ಪ: ಇಲ್ಲಿನ ಜಾಲಿ ಫ್ರೆಂಡ್ಸ್ ಶಟ್ಲ್ ಅಸೋಸಿಯೇಶನ್ ಫೆ ೨೨ರಿಂದ ೨೪ರವರೆಗೆ ನಡೆಸಿದ ಜಿಲ್ಲಾ ಮಟ್ಟದ ಹೊನಲು ಬೆಳಕಿನ ಶಟ್ಲ್ ಡಬಲ್ಸ್ ಪಂದ್ಯಾವಳಿಯ ಪ್ರತಿಷ್ಠಿತ ಪುರುಷರ ವಿಭಾಗದ ಪ್ರಶಸ್ತಿಯನ್ನು ಸ್ಟಾರ್ ಸ್ಪೋರ್ಟ್ಸ್ ಅಸೋಸಿಯೇಶನ್‌ನ ಉದಯಪ್ರಕಾಶ್ ರೂಬೆನ್ ಕುಲಾಸೊ ಮತ್ತು ಸುಧೀರ್ ಶೆಟ್ಟಿ ಜೋಡಿ ಗೆದ್ದುಕೊಂಡಿತು. ರನ್ನರ್ಸ್ : ತಮ್ಮಣ್ಣಯ್ಯ ಶಿವಕುಮಾರ್-ರಾಧಾಕೃಷ್ಣ ಜೋಡಿ.

ಮಹಿಳೆಯರ ಪ್ರಶಸ್ತಿ : ಬರ್ನಡಿನ್ ರೋಶನಿ ಕುಲಾಸೊ ಮತ್ತು ಪ್ರೇಮಾ ಶೆಟ್ಟಿ; ರನ್ನರ್ಸ್-ನ ರಾ. ಪುರದ ಸುಮಾ ಮತ್ತು ಗುಣವತಿ (ಜ್ವಾಲಾಮಾಲಿನಿ) ಮಿಕ್ಸೆಡ್ ಡಬಲ್ಸ್ ವಿಜೇತರು : ಉದಯಪ್ರಕಾಶ್ ಮತ್ತು ಬರ್ನಡಿನ್; ರನ್ನರ್ಸ್: ಸುಧೀರ್ ಶೆಟ್ಟಿ, ಪ್ರೇಮಾ ಶೆಟ್ಟಿ.

ಜಯಪುರ ಕೃಷಿ ಕಾರ್ಮಿಕ ಮಹಿಳೆ ಪೊನ್ನಮ್ಮಳ ಸಾವು "ಕೊಲೆ ಅಲ್ಲ, ಆಕಸ್ಮಿಕ ದುರ್ಮರಣ"

ಜಯಪುರ: ಇಲ್ಲಿ ಫೆ ೨೦ರಂದು ಬಸ್ ಸ್ಟ್ಯಾಂಡ್ ಬಳಿ ಸತ್ತು ಬಿದ್ದಿದ್ದ ಪೊನ್ನಮ್ಮ ಎಂಬ ಕೃಷಿ ಕಾರ್ಮಿಕಳ ಸಾವು ಆಕಸ್ಮಿಕವೆಂದೂ, ಕೊಲೆ ಅಲ್ಲವೆಂದೂ ಶವ ಪರೀಕ್ಷೆ ಮತ್ತು ಪೋಲೀಸ್ ತನಿಖೆಯಿಂದ ತಿಳಿದು ಬಂದಿದೆ

ಜಲದುರ್ಗದ ಗಣೇಶ ಎಂಬ ಕಾರ್ಮಿಕನ ಮಡದಿಯಾದ ಸುಮಾರು ೩೫-೩೮ ಪ್ರಾಯದ ಈಕೆ ಯಾವಾಗಲೂ ವಿಪರೀತ ಕುಡಿದು ಸುತ್ತುತ್ತಿದ್ದಳೆಂದೂ, ಅಂದು ರಾತ್ರಿ ರಸ್ತೆಯಿಂದ ತಗ್ಗಿಗೆ ಬಿದ್ದಾಗ ತಲೆಗೆ ಪೆಟ್ಟಾಗಿ ಸತ್ತಿರಬೇಕೆಂದೂ ಹೇಳಲಾಗಿದೆ

ಶವದ ತಲೆಗೆ ತೀವ್ರ ಪೆಟ್ಟು ಬಿದ್ದಿರುವುದು ಕಂಡು ಇದೊಂದು ಅತ್ಯಾಚಾರ ಮತ್ತು ಕೊಲೆ ಪ್ರಕರಣವಿರಬಹುದೆಂದು ಶಂಕಿಸಿ ಬಾಳೆಹೊನ್ನೂರು ಪೋಲೀಸರು ಅಂತೆಯೇ ಪ್ರಕರಣ ದಾಖಲು ಮಾಡಿಕೊಂಡಿದ್ದರು. ಕೊಪ್ಪ ಸರ್ಕಲ್ ಇನ್ಸ್‌ಪೆಕ್ಟರ್ ಎಸ್.ಎಫ್. ಪಾಶಾ ತನಿಖೆ ನಡೆಸಿದ್ದರು. ಊರಲ್ಲೂ ಈ ಪ್ರಕರಣ ತುಂಬಾ ಕುತೂಹಲ ಕೆರಳಿಸಿತ್ತು.

ಆಕೆಯ ಮೇಲೆ ಅತ್ಯಾಚಾರ ನಡೆದಿಲ್ಲ ಮತ್ತು ತಲೆಗೆ ಬಿದ್ದ ಪೆಟ್ಟು ಯಾವುದೇ ಆಯುಧದಿಂದಾದುದಲ್ಲ ಎಂದು ಶವ ಪರೀಕ್ಷೆಯಿಂದ ತಿಳಿದು ಬಂತೆನ್ನಲಾಗಿದೆ. ಕೊಪ್ಪ ಭೇಟಿಯಲ್ಲಿದ್ದ ಡಿಐಜಿ ಅವರೂ ತರೀಕೆರೆ ಡಿವೈಎಸ್ಪಿ ಜೊತೆ ಸ್ಥಳಕ್ಕೆ ಭೇಟಿ ಕೊಟ್ಟಿದ್ದರು

ಹಿರಿಯ ರಾಜಕೀಯ, ಸಾಮಾಜಿಕ ಧುರೀಣ ಮನಮೋಹನ ಕಲ್ಲೆ ನಿಧನ

ಕುದುರೆಗುಂಡಿ: ತಾಲ್ಲೂಕಿನ ಪ್ರಸಿದ್ಧ ಕಾಂಗ್ರೆಸ್ ನಾಯಕರಲ್ಲೊಬ್ಬರೂ, ಹಿಂದುಳಿದ ಜಾತಿಗಳ ಮುಖಂಡರೂ ಆಗಿದ್ದ ಮನಮೋಹನ ಕಲ್ಲೆಯವರು ಫೆ. ೨೮ರ ಬೆಳಗಿನ ಜಾವ ಹಠಾತ್ ನಿಧನರಾದರು. ಅವರಿಗೆ ಕೇವಲ [illegible] ವರ್ಷ ವಯಸ್ಸಾಗಿತ್ತು.

ಅವರ ನಿಧನದ ಸುದ್ದಿ ತಿಳಿದು ಅಪಾರ ಸಂಖ್ಯೆಯ ಅಭಿಮಾನಿಗಳು ಮತ್ತು ಬಂಧುಗಳು ಆಗಮಿಸಿ, ತಮ್ಮ ಶ್ರದ್ಧಾಂಜಲಿ ಸಲ್ಲಿಸಿದ್ದಾರೆ. [illegible] ಕುದುರೆಗುಂಡಿ ಪೇಟೆ ಬಂದ್ ಆಗಿತ್ತು.

ಹೆಲಿಪ್ಯಾಡ್ ನಿರ್ಮಾಣ ವಿರೋಧಿಸಿ ರಿಟ್

ಶೃಂಗೇರಿಯ ಬಳಿ ನಿರ್ಮಿಸಲಾಗುತ್ತಿರುವ ಹೆಲಿಪ್ಯಾಡ್‌ನ್ನು ಕೈ ಬಿಡುವಂತೆ ಆದೇಶಿಸಬೇಕೆಂದು ಕೋರಿ ಹೈ ಕೋರ್ಟಿನಲ್ಲಿ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಯೊಂದನ್ನು ಹೂಡಲಾಗಿದೆ.

ಈ ಮೊಕದ್ದಮೆಯನ್ನು ವಿಚಾರಣೆಗೆ ಅಂಗೀಕರಿಸಿದ ನ್ಯಾ॥ ರಾಜೇಂದ್ರ ಬಾಬು ಅವರು ಪ್ರತಿವಾದಿಗಳಿಗೆ ತುರ್ತು ನೋಟೀಸು ನೀಡಲು ಆದೇಶ ಮಾಡಿದ್ದಾರೆ

ಶೃಂಗೇರಿ ತಾಲ್ಲೂಕು ಕಿರಕೋಡು ಕೃಷ್ಣ ಭಟ್ಟರ ಮಗ ನಾಗರಾಜ ಎಂಬುವರು ಈ ರಿಟ್ ಅರ್ಜಿ ಸಲ್ಲಿಸಿದ್ದು, ಅದೇ ಗ್ರಾಮದವರಾದ ಯುವ ವಕೀಲ ವಿ. ಆರ್. ನಟಶೇಖರ್ ವಕಾಲತ್ತು ವಹಿಸಿದ್ದಾರೆ. (ನಟಶೇಖರ್, ಶೃಂಗೇರಿ ತಾಲ್ಲೂಕಿನಲ್ಲೊಂದು ದಂತ ಕತೆಯೇ ಆಗಿರುವ ಮಾಜಿ ಹೈಸ್ಕೂಲ್ ಹಿಂದಿ ಪಂಡಿತರೂ ಸಂಸ್ಕೃತ ವಿದ್ವಾಂಸರೂ ಆಗಿರುವ ಶ್ರೀ ರಾಮಕೃಷ್ಣ ಭಟ್ಟ ಹೆಂದೆಯವರ ಮಗ.)

ವಿವಿಐಪಿಗಳಿಗಾಗಿ !

ಶೃಂಗೇರಿ ಮಠಕ್ಕೆ ಯಾವಾಗಲೋ ಐದೋ ಆರೋ ವರ್ಷಕ್ಕೊಮ್ಮೆ ಭೇಟಿ ಕೊಡುವ ಪ್ರಧಾನ ಮಂತ್ರಿ ಮುಂತಾದ 'ಅತಿ ವಿಶಿಷ್ಟ' ಗಣ್ಯರಿಗಾಗಿ (ವಿವಿಐಪಿ) ಮೆಣಸೆ ಗ್ರಾಮದ ಸ. ನಂ. ೭೯ ರಲ್ಲಿ ಹೆಲಿಪ್ಯಾಡ್ ನಿರ್ಮಿಸಲು ತೀರ್ಮಾನಿಸಲಾಗಿದ್ದು, ಚಿಕ್ಕಮಗಳೂರು ಜಿಲ್ಲಾಧಿಕಾರಿಗಳು ಆ ಸ ನಂಬರಿನ ಪೈಕಿ ೫ ಎಕರೆ ಜಾಗವನ್ನು ಇದಕ್ಕಾಗಿ ಮಂಜೂರು ಮಾಡಿ ೧೭ ೭ ೮೯ರಲ್ಲಿ ಆದೇಶ ಹೊರಡಿಸಿದ್ದಾರೆ.

ಅರ್ಜಿದಾರರು ತಮ್ಮ ಮನವಿಯಲ್ಲಿ, ಜಿಲ್ಲಾಧಿಕಾರಿಗಳ ಈ ಮೇಲ್ಕಂಡ ಆಜ್ಞೆಗೆ ಮುಂಚೆ ಈ ವಿಚಾರವನ್ನು ಸ್ಥಳೀಯ ರೈತರಿಗೆ ಪ್ರಚುರಪಡಿಸಲಿಲ್ಲ ; ಅವರ ಆಕ್ಷೇಪಣೆ ಅಥವಾ ಒಪ್ಪಿಗೆ ಕೇಳಲಿಲ್ಲ ; ಹೇಳಿಕೆ-ಕೇಳಿಕೆ ನಡೆಯಲಿಲ್ಲ. ಉನ್ನತ ಅಧಿಕಾರಿಗಳೂ ರಾಜಕಾರಣಿಗಳೂ ಸೇರಿ ದಿಢೀರ್ ತೆಗೆದುಕೊಂಡ ಈ ನಿರ್ಧಾರದಿಂದ ರೈತರಿಗೆ ತಮ್ಮ ಅಹವಾಲು ಸಲ್ಲಿಸುವ ಅವಕಾಶವೇ ವಂಚಿತವಾಗಿ, ಅವರ ಮೂಲಭೂತ ಹಕ್ಕನ್ನೇ ಮೊಟಕುಗೊಳಿಸಿದಂತಾಗಿದೆ ಎಂದು ಆರೋಪಿಸಿದ್ದಾರೆ.

ಆಕ್ಷೇಪಣೆಗಳು

ಅರ್ಜಿದಾರರ ವಾದದ ಮುಖ್ಯಾಂಶಗಳು ಹೀಗಿವೆ : ಮೆಣಸೆ ಸೇತುವೆಯಿಂದ ಮಸಿಗೆ ಗ್ರಾಮದ ಕಡೆ ಹೋಗುವ ರಸ್ತೆಯಲ್ಲಿರುವ ಉದ್ದೇಶಿತ ಈ ಹೆಲಿಪ್ಯಾಡ್ ಪ್ರದೇಶ ಶೃಂಗೇರಿ ತಾಲ್ಲೂಕಿನ ಹೃದಯ ಭಾಗದಲ್ಲಿದ್ದು ಉತ್ತಮ ಕಾಡನ್ನೂ, ಅಮೂಲ್ಯ ಧನಮೂಲಿಕೆ ಮುಂತಾದುವನ್ನೂ ಹೊಂದಿದ್ದು ಸುತ್ತಮುತ್ತಲ ಭೂಮಿಗೆ ಉತ್ತಮ [illegible]ಯನ್ನೂ, ಬೇಸಿಗೆಯಲ್ಲಿ ತಂಪನ್ನೂ, ರೈತರಿಗೆ ಸೊಪ್ಪು, ಸೌದೆ, ದರಗು ಮುಂತಾದ ಸಾಮಗ್ರಿಗಳನ್ನೂ ಹಲವರಿಗೆ ಜೀವನೋಪಾಯವನ್ನೂ ಒದಗಿಸಿದ್ದ ಈ ಕಾಡಿನ ನಾಶದಿಂದ ರೈತರ ಜೀವನದ ಮೇಲೆ ಭಾರೀ ದುಷ್ಪರಿಣಾಮ ವಾಗಲಿದೆ.

ಅಲ್ಲದೆ ಇಲ್ಲಿನ ಭೂ ಸವಕಳಿಯಿಂದ ಸುತ್ತಮುತ್ತಲ ಜಮೀನುಗಳಿಗೆ ಹೂಳು ತುಂಬಿ ಹಾನಿಯಾಗುತ್ತದೆ. ಕಾಡಿನ ರಕ್ಷಣೆಯಿಲ್ಲದ್ದರಿಂದ ವಿಪರೀತ ಗಾಳಿ ಬೀಸಿ ಅಡಿಕೆ ತೋಟಗಳು ನಾಶವಾಗುವುದಲ್ಲದೆ, ಫಸಲು, ಅಪ್ಪೇಕೆ ಹೂವು, ಹೀಚು ಕಾಯಿಗಳು ಸಹ ಉದುರಿ ಹೋಗುತ್ತವೆ ಜಮೀನಿನ ಫಲವತ್ತತೆಯೂ ಹಾಳಾಗುತ್ತದೆ ಮುಂದೆ ಹೆಲಿಕಾಪ್ಟರುಗಳು ಬಂದು-ಹೋಗುವ ಸಮಯದಲ್ಲೂ ಇದೇ ರೀತಿ ನಾನಾ ತರದ ಹಾನಿ ಸಂಭವಿಸುತ್ತದೆ.

ಹೆಲಿಪ್ಯಾಡ್ ನಿರ್ಮಿಸಲು ಶೃಂಗೇರಿಗೆ ಸಮೀಪದಲ್ಲೇ ಬೇರೆ ಬೇಕಾದಷ್ಟು ಬಂಜರು ಅಥವಾ ಕೃಷಿಗೊಳಪಡದ ಭೂಮಿಯಿದೆ ; ಅಥವಾ ಶೃಂಗೇರಿಯ ಹೊಳೆ ಮೈದಾನದಂಥ ವಿಶಾಲ ಬಯಲಿದೆ. ಅದ್ಯಾವುದನ್ನೂ ಪರಿಶೀಲಿಸದೆ ಈ ಸಮೃದ್ಧ ಭೂಮಿಯನ್ನು ಆಯ್ಕೆ ಮಾಡಿರುವುದು ಅಧಿಕಾರಿಗಳ ದಬ್ಬಾಳಿಕೆಯ ಕ್ರಮವಾಗಿದೆ.

ಶಂಕರಾಚಾರ್ಯರ ಧರ್ಮ ಪೀಠವಾದ ಶೃಂಗೇರಿಗೆ ದಿನವೂ ಸಾವಿರಾರು ಜನ ಯಾತ್ರಾರ್ಥಿಗಳು ಭೇಟಿ ಕೊಡುತ್ತಿದ್ದರೂ ಒಂದು ಸುಸಜ್ಜಿತ ಬಸ್ ನಿಲ್ದಾಣವಿಲ್ಲ; ರಸ್ತೆಗಳಿಲ್ಲ ; ಉತ್ತಮವಾದ ಬೇರಾವುದೇ ಸೌಕರ್ಯಗಳಿಲ್ಲ. ಅಲ್ಲದೆ ತಾಲ್ಲೂಕಿನ ಜನತೆಗೂ ಅತ್ಯಂತ ತೀವ್ರವಾದ ಸಮಸ್ಯೆಗಳಿವೆ, ಕುಂದು-ಕೊರತೆಗಳಿವೆ. ಅವಾವುದನ್ನೂ ಪರಿಹರಿಸದೆ ಕೇವಲ ಉನ್ನತ ರಾಜಕಾರಣಿಗಳಿಗಾಗಿ ಹೆಲಿಪ್ಯಾಡ್ ಕಟ್ಟಿಸುವ ಕಾರ್ಯ ಇಡೀ ಜಿಲ್ಲೆಯಲ್ಲಿ ಸಾರ್ವಜನಿಕರ ಟೀಕೆಗೆ, ಅಸಮಾಧಾನಕ್ಕೆ, ಆಕ್ರೋಶಕ್ಕೆ ಗುರಿಯಾಗಿದೆ.

ಕೈ ಬಿಡಬೇಕು

ಈ ಮೇಲಿನಂತೆ ಸವಿಸ್ತಾರವಾಗಿ ವಾದ ಮಂಡಿಸಿರುವ ಅರ್ಜಿದಾರರು, ಹೆಲಿಪ್ಯಾಡ್ ನಿರ್ಮಾಣಕ್ಕಾಗಿ ಈಗಾಗಲೇ ಆರಂಭಿಸಿರುವ ಕೆಲಸಗಳನ್ನು ಕೂಡಲೇ ನಿಲ್ಲಿಸಿ, ಇಡೀ ಯೋಜನೆಯನ್ನು ಕೈ ಬಿಡುವಂತೆ ಆದೇಶಿಸಬೇಕೆಂದೂ, ಹೆಲಿಪ್ಯಾಡ್‌ಗಾಗಿ ಜಿಲ್ಲಾಧಿಕಾರಿಗಳು ಭೂಮಿ ಮಂಜೂರು ಮಾಡಿರುವ ೧೭-೭-೮೯ ರ ಆದೇಶವನ್ನು ರದ್ದುಗೊಳಿಸಬೇಕೆಂದೂ ಕೋರಿದ್ದಾರೆ.

ತಮ್ಮ ವಾದಕ್ಕೆ ಪುಷ್ಟಿಯಾಗಿ ಅವರು ೨೪-೯-೮೯ ರ 'ಮುಂಜಾವು' ವರದಿಯನ್ನೂ, ಅದಕ್ಕೆ ಸಾರ್ವಜನಿಕ ಪ್ರತಿಕ್ರಿಯೆಯ ರೂಪದಲ್ಲಿ ೧-೧೦-೧೯೮೯ರ ಸಂಚಿಕೆಯಲ್ಲಿ ಪ್ರಕಟವಾಗಿರುವ ಕಿಗ್ಗದ ವೆಂಕಟೇಶ ಪ್ರಸನ್ನ ಅವರ ಖಾರವಾದ ಪ್ರತಿಭಟನಾ ಪತ್ರವನ್ನೂ ಉಲ್ಲೇಖಿಸಿದ್ದಾರೆ.

ನ್ಯಾಯಮೂರ್ತಿಗಳು, "ಇದರಲ್ಲಿ ಸಾರ್ವಜನಿಕ ಹಿತಾಸಕ್ತಿಯ ವಿಚಾರವೆಲ್ಲಿದೆ?" ಎಂದು ವಕೀಲರನ್ನು ಪ್ರಶ್ನಿಸಿದಾಗ ಅವರು ಈ ಮೇಲ್ಕಂಡ ಪತ್ರವನ್ನೇ ಉಧ್ಧರಿಸಿದರು.

"ಈ ಹಿಂದೆ ಅದೆಷ್ಟು ಬಾರಿ ಶೃಂಗೇರಿಗೆ ಹೆಲಿಕಾಪ್ಟರ್‌ನಲ್ಲಿ ಮಹಾ ಮಹಾ ಮಂತ್ರಿ-ಅಧಿಕಾರಿಗಳು ಬಂದಿಲ್ಲ? ಅದರೂ ಶೃಂಗೇರಿ ಎಷ್ಟು ಬದಲಾಗಿದೆ ? ಎಷ್ಟು ಅಭಿವೃದ್ಧಿ ಹೊಂದಿದೆ ? ಯಾವನೋ ಒಬ್ಬ ಮಂತ್ರಿ ಹೆಲಿಕಾಪ್ಟರ್‌ನಲ್ಲಿ ಬಂದು, ದೇವಸ್ಥಾನವನ್ನು ನೋಡಿ ಒಂದು ಒಣ ಭಾಷಣ ಬಿಗಿದು, ಕೆಲಸಕ್ಕೆ ಬಾರದ ಪೊಳ್ಳು ಆಶ್ವಾಸನೆಗಳನ್ನು ಕೊಟ್ಟು ಹೋಗುವುದಕ್ಕೆ, ನಮ್ಮದೇ ಆದ ಎಷ್ಟೋ ಲಕ್ಷ ರೂಪಾಯಿಗಳನ್ನು ಹುಡಿಗಟ್ಟಲು ಸರ್ಕಾರ ಮುಂದಾಗಿದೆ ....

ಅಂತಹ 'ವಿಐಪಿ' ವ್ಯಕ್ತಿಯೊಬ್ಬ ಬಂದರೆ ಜನಜೀವನವೇ ಅಸ್ತವ್ಯಸ್ತವಾಗುವುದು....

ಆ ಮಹೋದಯ ಹೆಲಿಪ್ಯಾಡ್‌ನಿಂದ ದೇವಸ್ಥಾನಕ್ಕೆ ಬರಲು ಬೆಂಗಳೂರಿನಿಂದಲೇ ಕಾರು ಬರಬೇಕು ! ಅದೇ ಕಾರಿನಲ್ಲಿ ಅಲ್ಲಿಂದಲೇ ಆತ ಬರಬಾರದೇಕೆ ?....

ಈ ವ್ಯಕ್ತಿಗಳು ಶೃಂಗೇರಿಯನ್ನು ನೋಡದಿದ್ದರೆ ಯಾವ ಹಾನಿಯೂ ಆಗುವುದಿಲ್ಲ. ಅದೇ ಹೆಲಿಪ್ಯಾಡ್ ನಿರ್ಮಾಣಕ್ಕೆ ವೆಚ್ಚವಾಗುವ ಹಣವನ್ನೇ ಅಭಿವೃದ್ಧಿ ಕಾರ್ಯಗಳಿಗೆ ಬಳಸಿದ್ದರೆ, ಮನೆಯಿಲ್ಲದ ಎಷ್ಟೋ ಜನರಿಗೆ ಮನೆಗಳನ್ನು ಕಟ್ಟಿಕೊಡಬಹುದಿತ್ತು; ಕೆಲವು ಹಳ್ಳಿಗಳಿಗೆ ರಸ್ತೆಯನ್ನೋ ವಿದ್ಯುತ್ ಸೌಕರ್ಯವನ್ನೋ ಒದಗಿಸಬಹುದಿತ್ತು; ಅಥವಾ ಅದೇ ಹಣದಲ್ಲಿ ಶೃಂಗೇರಿಗೆ ಅತ್ಯಾಗತ್ಯವಾಗಿ ಬೇಕಾದ ಬಸ್ ನಿಲ್ದಾಣ ನಿರ್ಮಿಸಬಹುದಿತ್ತು; ಅಥವಾ ಹಳ್ಳಿಯ ಮೂಲೆಯಲ್ಲಿ ಶಾಲೆಯನ್ನೋ ಆಸ್ಪತ್ರೆಯನ್ನೋ ತೆರೆಯಬಹುದಿತ್ತು. ಈ ಯಾವ ಯೋಜನೆಗಳಿಗೂ ಸರ್ಕಾರದ ಬಳಿ ಇಲ್ಲದ ಹಣ ಇಂಥ ವಿಐಪಿ ದರ್ಬಾರಿಗೆ ಎಷ್ಟು ಬೇಕಾದರೂ ಒದಗುತ್ತದಲ್ಲ !?...."

—ಹೀಗೆಂದು ವೆಂಕಟೇಶ ಪ್ರಸನ್ನ ಬರೆದಿದ್ದರು.

ಅದನ್ನು ಪೂರ್ತಿ ಓದಿದ ನ್ಯಾಯಮೂರ್ತಿಗಳು, "ಓಹೋ. 'ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಜುಟ್ಟಿಗೆ ಮಲ್ಲಿಗೆ ಹೂ' ಎಂಬಂತಾಗಿದೆಯಲ್ಲಿ?" ಎಂದಾಗ, ಇಡೀ ಸಭಾಂಗಣ ಘೊಳ್ಳೆಂದು ನಕ್ಕು ಸಹಮತ ಸೂಚಿಸಿತು.

(೩ನೇ ಪುಟಕ್ಕೆ)

ಪದ್ಯದಂಗಳ

ಸಾವ ನಾನು ಬಯಸುವುದಿಲ್ಲ

ಸಾವ ನಾನು ಬಯಸುವುದಿಲ್ಲ
ಆದರೂ ಶೀದಿದೆ ನನಗೆ
ಬದುಕು ಶಾಶ್ವತವಲ್ಲ
ಜಗದ ಮನುಜರಲಿ
ಜಾತಿ-ಧರ್ಮಗಳೆಂಬ
ವಿನಾಶದ ಕಿಡಿಗಳು
ಹತ್ತಿಕೊಂಡು ಉರಿಯುವಾಗ
ಕಿಡಿಯ ಸಿಡಿತಕ್ಕೆ ಸಿಕ್ಕ
ನನ್ನ ಜನಗಳ
ಹಟ ಕಂಡವ್ಮಗಳ
ಕೇಕೆಯ ಬಿಡಿಸಲೋಡಿದರೆ
ನಾನು ಸುಡುತ್ತೇನೆಂದು ಗೊತ್ತು.
ಆದರೂ ಅರಿವಿಲ್ಲ ನನಗೆ
ಸ್ವಾರ್ಥದಾ ಬದುಕು
ಸ್ವಾರ್ಥದಾ ಬದುಕು.

—ಸಿ. ಕೆಂಚಪ್ಪ

ಕುಡಿಯುವ ನೀರಿಗೆ ಪಲ್ಪರ್ ನೀರು ಸೇರಿಸುವವರ ವಿರುದ್ಧ ಕ್ರಮ

ಕುಡಿಯುವ ನೀರಿಗೆ ಕಾಫಿ ಪಲ್ಪರ್‌ನ ನೀರು ಬಿಡುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ. ಈ ಸಂಬಂಧ ಈಗಾಗಲೇ ಐದಾರು ಪ್ರಕರಣಗಳನ್ನು ಪತ್ತೆಹಚ್ಚಲಾಗಿದ್ದು ಕನ್ನಾಪುರ 'ಎ' ಬ್ಲಾಕ್, ಮುರುಗನ್ ಎಸ್ಟೇಟ್, ವೈ. ಡಿ ನಾರಾಯಣ ಗೌಡ, ಗಬ್ಬಳ್ಳಿಪುರ, ಮಲ್ಲೇಶನಗುಡ್ಡ, ಮೇರುತಿಖಾನ್, ಸತ್ತಿಹಳ್ಳಿ ಮತ್ತು ಆನೆಗುಡ್ಡ ಇವೇ ಆರೋಪಿ ಎಸ್ಟೇಟುಗಳಾಗಿವೆ. ಇವುಗಳ ಪೈಕಿ ಕನ್ನಾಪುರ, ಮುರುಗನ್, ಸತ್ತಿಹಳ್ಳಿ, ಮೇರುತಿಖಾನ್ ಎಸ್ಟೇಟು ಇವರುಗಳಿಗೆ ಈಗಾಗಲೇ ಕಾರಣ ಕೇಳಿ ನೋಟೀಸು ಜಾರಿಮಾಡಲಾಗಿದೆ ಎಂದು ತಿಳಿದು ಬಂದಿದೆ.

ಕನ್ನಡ ಅಂಕಿಗಳನ್ನೇ ಬಳಸಿ
೦ ೧ ೨ ೩ ೪ ೫ ೬ ೭ ೮ ೯

ರೇಷ್ಮೆಯು ಒಂದು ನೈಸರ್ಗಿಕ ತಳಿ? —ರೇಷ್ಮೆ ಇಲಾಖೆಯ ಪ್ರತಿಕ್ರಿಯೆ

ಸಿಗದಾಳು ಘಾಟಿಯ ಸಮೀಪದಲ್ಲಿ ಒಂದು ಬಗೆಯ ನೈಸರ್ಗಿಕ ರೇಷ್ಮೆ ತಳಿ ಪತ್ತೆಯಾದುದನ್ನು ಕುರಿತ 'ಮುಂಜಾವು' ವರದಿಗೆ ('ರೇಷ್ಮೆಯ ಒಂದು ನೈಸರ್ಗಿಕ ತಳಿ?' 'ಮುಂಜಾವು', ೧೦ ೨ ೯೧) ರೇಷ್ಮೆ ಇಲಾಖೆ ಈ ಕೆಳಗಿನ ಪ್ರತಿಕ್ರಿಯೆ ನೀಡಿದೆ:

ಈ ಹಿಂದೆಯೇ ಈ ಬಗೆಯ ಕೆಲವು ('ಟಸ್ಸಾರ್' ಮುಂತಾದ) ಕಾಡಿನ ತಳಿಗಳ ಸಾಕಾಣಿಕೆಗಾಗಿ ಸಂಶೋಧನೆ ನಡೆದು ಅವು ಫಲಪ್ರದವಾಗಿಲ್ಲ ಈ ತಳಿಗಳು ಮನೆಯಲ್ಲಿ ಸಾಕಲು ಬರುವುದಿಲ್ಲ. ಕಾಡಿನಲ್ಲೇ ಬೆಳೆಯಲು ಬಿಟ್ಟು ಗೂಡು ಸಂಗ್ರಹಿಸುವುದು ವ್ಯಾವಹಾರಿಕವಾಗಿ ಅಸಾಧ್ಯ.

ಜೊತೆಗೆ ಈ ತಳಿಯಲ್ಲಿ ನೂಲು ಕಡಿಮೆ; ಬಿಚ್ಚಲೂ ಸುಲಭವಿಲ್ಲ. ಈಗ ದೊರೆತಿರುವ ತಳಿಯ ಬಗ್ಗೆಯೇ ಹಿಂದೆ ಬೆಳಗಾವಿಯಲ್ಲಿ ಸಂಶೋಧನೆ ನಡೆದು ಅದು ಫಲ ಕೊಟ್ಟಿಲ್ಲ. ಆದ್ದರಿಂದ ಮನೆಯ ಸಾಕಾಣಿಕೆಗೆ ಅತ್ಯುತ್ತಮವಾದುವೆಂದು ಹಾಗೂ ನೂಲಿನ ಗುಣ ಮಟ್ಟದ ದೃಷ್ಟಿಯಿಂದ ಮಿಶ್ರ ತಳಿ ಮತ್ತು ಬೈವೋಲ್ಟೈನ್ ತಳಿಗಳನ್ನು ಆಯ್ಕೆ ಮಾಡಲಾಗಿದೆ. ಅದರಲ್ಲೂ ಮಲೆನಾಡಿಗೆ ಬೈವೋಲ್ಟೈನ್ ತುಂಬಾ ಹೊಂದಿಕೆಯಾಗಿದ್ದು, ಕೊಪ್ಪ, ಶೃಂಗೇರಿ, ನ. ರಾ. ಪುರ ಮುಂತಾದ ಮಲೆನಾಡಿನ ತಾ॥ ಗಳನ್ನು ಈ ತಳಿಯ ಬಿತ್ತನೆ ವಲಯ (ಸೀಡ್ ಏರಿಯ) ಎಂದು ಸರ್ಕಾರ ಘೋಷಿಸಿದ್ದು, ಈ ಗೂಡುಗಳಿಗೆ ಉತ್ತಮ ಬೆಲೆಯೂ ಬರುತ್ತಿದೆ.

ಓದುಗರ ಪತ್ರಗಳು

ತುಂಡಾದ ರಸ್ತೆ : ಶಾಸಕರಿಂದ ಖುದ್ದು ವೀಕ್ಷಣೆ, ದುರಸ್ತಿ ಭರವಸೆ

ಪ್ರಿಯರೆ,

ಕಳೆದ ೧೭ರಂದು ಹುಲಿಗರಡಿ ಜನತಾ ಕಾಲೊನಿಯಲ್ಲಿ ಮಂಡಲ ಪ್ರಧಾನರ ಅಧ್ಯಕ್ಷತೆಯಲ್ಲಿ ಹೊಸ ಅಂಗನವಾಡಿಯನ್ನು ಉದ್ಘಾಟಿಸಿದ ಶಾಸಕ ಶಾಮಣ್ಣನವರು, ಅನಂತರ ಊರಿನ ಕುಂದು-ಕೊರತೆಗಳನ್ನು ತಾಳ್ಮೆಯಿಂದ ಕೇಳಿದರು. ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಕೂಳೂರು-ಕೊಗ್ರೆ ರಸ್ತೆ ಮೊಸರವಾವು ಎಂಬಲ್ಲಿ ಭಾರೀ ಭೂ ಕುಸಿತದಿಂದ ತುಂಡಾಗಿರುವಲ್ಲಿಗೆ ಖುದ್ದು ಬಂದು ನೋಡಿದ ಶಾಸಕರು, ತಮ್ಮಿಂದಾದ ಎಲ್ಲ ರೀತಿಯಲ್ಲೂ ಪ್ರಯತ್ನಿಸಿ ದುರಸ್ತಿ ಮಾಡಿಸುವ ಭರವಸೆ ನೀಡಿದರು.

ಶಾಸಕರೇ ಖುದ್ದು ಪರಿಶೀಲಿಸಿ ಆಸಕ್ತಿ ತೋರಿಸಿರುವುದರಿಂದ ಈಗಲಾದರೂ ಈ ರಸ್ತೆ ದುರಸ್ತಿಯಾಗುವುದೆಂಬ ಆಶಾಭಾವ ಗ್ರಾಮಸ್ಥರಲ್ಲಿ ಉಂಟಾಗಿದೆ.

—ಕೆ.ಎಸ್. ಭಾಸ್ಕರ ರಾವ್,
ಮೊಸರವಾವು.

ಕೊಪ್ಪ-ಮಕ್ಕಿಮನೆ-ಗಡಿಕಲ್ ರಸ್ತೆ ದುರವಸ್ಥೆ : ನಿಂತು ಹೋದ ಬಸ್ ಸೌಕರ್ಯ

ಪ್ರಿಯರೆ,

ಕೊಪ್ಪ-ಗುಣವಂತೆ-ಮಕ್ಕಿಮನೆ ಮಾರ್ಗವಾಗಿ ಗಡಿಕಲ್ಲಿಗೆ ಸೇರುವ ರಸ್ತೆ ಈ ಭಾಗದ ಹತ್ತಾರು ಹಳ್ಳಿಗಳಿಗೊಂದು ವರದಾನದಂತಿದೆ ಆದರೆ ಅದಕ್ಕೆ ತಕ್ಕಂತೆ ಈ ರಸ್ತೆ ಉತ್ತಮ ಸ್ಥಿತಿಯಲ್ಲಿಲ್ಲ ೪ ವರ್ಷದಿಂದೀಚೆಗೆ ಕೊಪ್ಪದಿಂದ ೩ ಕಿ. ಮೀ. ದೂರದವರೆಗೆ ಟಾರು, ಅನಂತರ ಜಲ್ಲಿ ಆಗಿದ್ದರೂ, ಜಲ್ಲಿ ಎಲ್ಲ ಕಿತ್ತು, ರಸ್ತೆ ವಾಹನ ಸಂಚಾರಕ್ಕೆ ಅಯೋಗ್ಯವಾಗಿದೆ

ಹಿಂದೆ ಗ್ರಾಮಸ್ಥರ ಕೋರಿಕೆಯಂತೆ ಈ ಮಾರ್ಗವಾಗಿ ಶಂಕರ್ ಸಾರಿಗೆ ಕೆಲವು ಬಸ್‌ಗಳನ್ನು ಓಡಿಸುತ್ತಿದ್ದು. ಸಾರಿಗೆ ಮುಷ್ಕರದಿಂದ ಅವು ನಿಂತು ಹೋದ ಮೇಲೆ ಇದೇ ಊರಿನ ಎಂ ಪಿ ರಾಮಸ್ವಾಮಿ ಎಂಬವರಿಗೆ ಆಗಿದ್ದ ಪರ್ಮಿಟನಲ್ಲಿ ತೀರ್ಥಹಳ್ಳಿಯ ಕಾಮತ್ ಮೋಟರ್ಸ್‌ನವರು ಒಂದು ವಾರ ಬಸ್ ಓಡಿಸಿದರು ಆದರೆ ಈ ರಸ್ತೆ ಅವರ ಬಸ್ಸನ್ನೇ ಬಲಿ ತೆಗೆದುಕೊಳ್ಳುವಂತೆ ಕಂಡಾಗ ಅವರು ಬಸ್ ನಿಲ್ಲಿಸಿ ಬಿಟ್ಟರು. ಈಗ ನಾಲ್ಕೈದು ವಾರಗಳಿಂದ ಬಸ್ಸೇ ಇಲ್ಲವಾಗಿದೆ.

ಈ ರಸ್ತೆಯ ಸಂಚಿನಕೊಡಿಗೆ ಸೇತುವೆ ಕೂಡ ದುರ್ಬಲವಾಗಿದೆ ಶಾಸಕರು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಇತ್ತ ತುರ್ತು ಗಮನ ಹರಿಸಿ. ಕೂಡಲೇ ದುರಸ್ತಿ ಮಾಡಿಸಬೇಕಾಗಿ ಕೋರುತ್ತೇವೆ

—ಗುಣವಂತೆ ಗ್ರಾಮಸ್ಥರು,
(೫೫ ಜನರ ಸಹಿಗಳಿವೆ.)

ರಸ್ತೆ ದುರಸ್ತಾಗಲಿ

ಪ್ರಿಯರೆ,

ಗ್ರಾಮಾಂತರ ಪ್ರದೇಶವಾಗಿರುವ ನೇತ್ರಕಲ್, ಕಳಸಾಪುರ ಮುಂತಾದ ಹಳ್ಳಿಗಳನ್ನು ತಾಲ್ಲೂಕು ಕೇಂದ್ರವಾದ ಕೊಪ್ಪಕ್ಕೆ ಸಂಪರ್ಕಿಸುವ ಏಕೈಕ ರಸ್ತೆಯಾಗಿದ್ದ ನೇತ್ರಕಲ್-ಕಳಸಾಪುರ ರಸ್ತೆಯು ಈ ಮೊದಲು ತಾಲ್ಲೂಕು ಮಂಡಳಿ ವ್ಯಾಪ್ತಿಯಲ್ಲಿದ್ದು, ಆ ಬಳಿಕ ಲೋಕೋಪಯೋಗಿ ಇಲಾಖೆಯ ಅಧಿಕಾರ ವ್ಯಾಪ್ತಿಗೆ ಬಂದು, ಹಾಲಿ ಮಂಡಲ ಪಂಚಾಯತಿಯ ಆಡಳಿತ ವ್ಯಾಪ್ತಿಯಲ್ಲಿರುತ್ತದೆ.

ಈ ರಸ್ತೆಗೆ ಜಲ್ಲಿ ಕಲ್ಲು ಹಾಕಿ ದುರಸ್ತಿ ಮಾಡಿ ಹಲವು ವರ್ಷಗಳಾಗಿವೆ ಈ ರಸ್ತೆಯನ್ನು ಇತ್ತೀಚೆಗೆ ತೆಂಗಿನಮನೆಯ ವರೆಗೂ ವಿಸ್ತರಿಸಲಾಗಿದ್ದು, ಇದರ ನಾದುರಸ್ತಿಯಿಂದಾಗಿ ಸಾರ್ವಜನಿಕರಿಗೆ ತುಂಬಾ ಅನಾನುಕೂಲ ಉಂಟಾಗುತ್ತಿದೆ. ಸುಮಾರು ೬ ಸಾವಿರ ಜನರು ಈ ರಸ್ತೆಯನ್ನು ಬಳಸುತ್ತಾರೆ.

ಈ ರಸ್ತೆಯಲ್ಲಿ ನೇತ್ರಕಲ್ ಎಸ್ಟೇಟ್ ವರೆಗಿನ ಸುಮಾರು ೩ ಕಿ. ಮೀ. ದೂರ ಡಾಂಬರು ಹಾಕಲಾಗಿದೆ, ಅಲ್ಲಿಂದ ಕಳಸಾಪುರದವರೆಗೆ ಜಲ್ಲಿ ಮಾತ್ರ ಹಾಕಲಾಗಿದ್ದು, ಅದೂ ಕೂಡ ಎದ್ದು ಹೋಗಿದೆ, ಹೋಗುತ್ತಾ ಇದೆ. ಅನಂತರ ತೆಂಗಿನಮನೆಯವರೆಗೆ ಕೇವಲ ಮಣ್ಣಿನ ರಸ್ತೆ ಮಾತ್ರವೇ ಇದೆ. ಸಾರ್ವಜನಿಕರಿಗೆ ಪ್ರಯಾಣಯೋಗ್ಯವಾಗಿ ಈ ರಸ್ತೆಯನ್ನು ಮಾರ್ಪಡಿಸುವುದು ತುಂಬಾ ಆಗತ್ಯವಾಗಿರುತ್ತದೆ.

ಸಾರ್ವಜನಿಕರ ಪರವಾಗಿ,
—ಎಂ ಹಮೀದ್.

ಶಿಕ್ಷಕರ ನೇಮಕವಾಗಲಿ

ಪ್ರಿಯರೆ,

ಹಾಲ್ಮುತ್ತೂರಿಗೆ ಸಮೀಪದ ಹುಲ್ಕೋಡಿನ ಏಕೋಪಾಧ್ಯಾಯ ಶಾಲೆಯಲ್ಲಿ ಈ ಹಿಂದೆ ಶಿಕ್ಷಕರಾಗಿ ಕೆಲಸ ನಿರ್ವಹಿಸುತ್ತಿದ್ದ ಚಂದ್ರೇಗೌಡ ಎಂಬವರು ಬೇರೆ ಕೆಲಸ ಸಿಕ್ಕಿ ಹೊರಟು ಹೋಗಿದ್ದಾರೆ. ಪರೀಕ್ಷೆ ಹತ್ತಿರವಾಗಿರುವುದರಿಂದ ಈಗ ಕೆಲವು ಗ್ರಾಮಸ್ಥರೇ ಶಾಲೆಯಲ್ಲಿ ಮಕ್ಕಳಿಗೆ ಸ್ವಲ್ಪ ಹೊತ್ತು ಪಾಠ ಮಾಡಿ ಮನೆಗೆ ಕಳಿಸುವಂಥ ಪ್ರಸಂಗ ಬಂದೊದಗಿದೆ.

ಈ ಬಗ್ಗೆ ಸಂಬಂಧಿಸಿದವರೆಲ್ಲರ ಗಮನಕ್ಕೆ ತರಲಾಗಿದ್ದು ಏನೂ ಪ್ರಯೋಜನವಾಗಿಲ್ಲ. ಇನ್ನಾದರೂ ಈ ಬಗ್ಗೆ ಸಂಬಂಧಿಸಿದವರು ಗಮನ ಹರಿಸಿ ಒಬ್ಬ ಶಿಕ್ಷಕರನ್ನು ಈ ಶಾಲೆಗೆ ಕಳಿಸಿ ಶೈಕ್ಷಣಿಕ ವರ್ಷದ ಕೊನೆಯ ದಿನಗಳಲ್ಲಿ ಮಕ್ಕಳಿಗಾಗುತ್ತಿರುವ ತೊಂದರೆಯನ್ನು ತಪ್ಪಿಸುವರೆಂದು ಆಶಿಸೋಣವೇ ?

—ಗ್ರಾಮಸ್ಥರು, ಹುಲ್ಕೋಡು

ಕೊಳಕು ಬೇನಾಮಿ ಪತ್ರಗಳು, ಪಾಪ!

ಪ್ರಿಯರೆ,

ಈಗೀಗ ನನಗೆ ಕೆಲವು ಕೆಟ್ಟ ಕೊಳಕು ಬೇನಾಮಿ ಪತ್ರಗಳು ಬರುತ್ತಿವೆ ಆ ಅಶ್ಲೀಲ ಪದಗಳನ್ನು ನೋಡಿದಾಗ ಬರೆದವರ ಮನದ ಕೊಳಕನ್ನು ಎಣಿಸಿಕೊಂಡು 'ಅಯ್ಯೋ ಪಾಪ!' ಎನಿಸುತ್ತದೆ

ಬರೆದವರ ಮನೋಭಾವ ಮತಿವಿಭ್ರಮತೆಯ ಮೊದಲನೇ ಹಂತವಾಗಿರಬಹುದು. ಮುಂದೆ ಇಂಥವರು ಸಮಾಜಕ್ಕೆ ಹಾನಿ ಎಸಗಬಲ್ಲಂತಹ ಕ್ರೂರಿಗಳೂ, ಮಾನಭಂಗ ಮಾಡುವವರೂ, ಕೊಲೆಗಾರರೂ ಆಗುವ ಸಂಭವವಿದೆ.

ಆದರೆ ನನಗೆ ಇಂತಹ ಕೊಳಕು ಮನದ ಯಾವುದೋ ಮೂಲೆಯಲ್ಲಿ ಒಳ್ಳೆಯತನ ಇದ್ದೇ ಇರುತ್ತದೆಂಬ ಬಲವಾದ ನಂಬಿಕೆ ಇದೆ. ಆ ಒಳ್ಳೆಯತನ ಬೆಳೆಯಲಿ.

ಬರೆದವರ ಅಕ್ಷರ ಬಹಳ ಚೆನ್ನಾಗಿದೆ. ಅವರು ಅದನ್ನು ಸಮಾಜದ ಸೇವೆಗಾದರೂ ಉಪಯೋಗಿಸಲಿ ಎಂದು ಹಾರೈಸುತ್ತೇನೆ.

ಡಾ|| ಎಸ್. ಆರ್. ಕೋದಂಡರಾಮ,
ವೈದ್ಯಾಧಿಕಾರಿ, ಹಂಚರವಳ್ಳಿ.

ಆಡಳಿತ ಸುಧಾರಣೆಯಲ್ಲಿ ಮತ್ತೊಂದು ಹೆಜ್ಜೆ

ಪ್ರಿಯರೆ,

ಕೊಪ್ಪ ತಹಸೀಲ್ದಾರ್‌ರವರು ತಾಲ್ಲೂಕಿನ ಎಲ್ಲಾ ಮುಜರಾಯಿ ಸಂಸ್ಥೆಗಳಿಗೂ ಇಲಾಖೆಯಿಂದ ಒದಗಿಸುವ ಅನುದಾನದ ಮೊಬಲಗನ್ನು ಪಡೆದುಕೊಳ್ಳುವಂತೆ ಪ್ರತಿ ತಿಂಗಳೂ ಸಂಸ್ಥೆಯ ಮುಖ್ಯಸ್ಥರುಗಳಿಗೆ 'ತಿಳುವಳಿಕೆ ಪತ್ರ'ವನ್ನು ಕಳುಹಿಸುವ ವಿನೂತನ ಪದ್ಧತಿಯನ್ನು ಈಚೆಗೆ ಪ್ರಾರಂಭಿಸಿರುವುದು ಸ್ವಾಗತಾರ್ಹ. ಇದರಿಂದ ಶ್ರಮ, ಕಾಲ ಹಾಗೂ ಹಣದ ಅಪವ್ಯಯವನ್ನು ತಡೆಗಟ್ಟಲು ಬಹಳ ಅನುಕೂಲವಾಗಿರುತ್ತದೆ.

ಸರ್ಕಾರ ಕೊಡುವ ಮತ್ತು ತೆಗೆದುಕೊಳ್ಳುವ ಎರಡೂ ಕಡೆಗೂ ಸಮಾನ ಗಮನ ಹರಿಸುವುದೆಂಬ ಅಂಶವನ್ನು ಶ್ರೀಯುತರ ಈ ಕ್ರಮ ಸೂಚಿಸುತ್ತದೆ. ಇದೇ ರೀತಿಯ ಸುಧಾರಣೆಯ ಹೊಸ ಹೆಜ್ಜೆಗಳು ಹೆಚ್ಚು ಹೆಚ್ಚು ಮೂಡಿ ಬರುವಂತಾಗಲಿ ಎಂದು ಹಾರೈಸುತ್ತೇನೆ. ಶ್ರೀಯುತರ ಈ ಕ್ರಮ ಅನುಕರಣೀಯವಾಗಿದ್ದು ಅವರನ್ನು ಎಲ್ಲ ಧಾರ್ಮಿಕ ಸಂಸ್ಥೆಗಳ ಕಾರ್ಯಕರ್ತರ ಪರವಾಗಿ ಅಭಿನಂದಿಸುತ್ತೇನೆ.

—ವೆಂಕಟ ಕೃಷ್ಣಪ್ಪ, ಹುಗ್ಗಿಹಳ್ಳಿ.

ಹೆಲಿಪ್ಯಾಡ್ ನಿರ್ಮಾಣಕ್ಕೆ ರಿಟ್

(೨ನೇ ಪುಟದಿಂದ)

ಅನಂತರ ನ್ಯಾಯ ಮೂರ್ತಿಗಳು ಮೊಕದ್ದಮೆಯನ್ನು ವಿಚಾರಣೆಗೆ ಅಂಗೀಕರಿಸಿದರು. ರಾಜ್ಯ ಸರ್ಕಾರ, ಡಿಸಿ, ತಹಸೀಲ್ದಾರ್, ಕೊಪ್ಪದ ಲೋಕೋಪಯೋಗಿ ಇಲಾಖೆ ಹಾಗೂ ಕೇಂದ್ರ ಸರ್ಕಾರದ ವಾಯುಯಾನ ಇಲಾಖೆಗಳನ್ನು ಪ್ರತಿವಾದಿಗಳನ್ನಾಗಿ ಕಾಣಿಸಲಾಗಿದೆ.

ಪ್ರಕರಣ ಜಿಲ್ಲೆಯಲ್ಲಿ ಮಾತ್ರವಲ್ಲ, ಜಿಲ್ಲೆಯ ಹೊರಗೂ, ನ್ಯಾಯಾಂಗ ಮತ್ತು ಸರ್ಕಾರಿ ವಲಯಗಳಲ್ಲೂ ತೀವ್ರ ಕುತೂಹಲ (ಆತಂಕವನ್ನು ಕೂಡ) ಹುಟ್ಟಿಸಿದೆ.

ದುಡಿವ ಜನತೆಯಲ್ಲಿ ಹೋರಾಟದ ಛಲವನ್ನೂ, 'ಮೇಲ್ಜಾತಿ'ಗಳಲ್ಲಿ ಅರಿವನ್ನೂ ಬಿತ್ತುತ್ತ ಸಾಗಿದ 'ಭೀಮ್ ಮಾರ್ಚ್'-ಅಂಬೇಡ್ಕರ್ ಶತಮಾನೋತ್ಸವ ಸೈಕಲ್ ಜಾಥಾ

"ದಲಿತರು ಗೌರವಾನ್ವಿತರು" (Dalith is dignified) ಎಂಬ ತಿಳುವಳಿಕೆಯ ಘೋಷಣೆಯೊಂದಿಗೆ ಡಾ|| ಅಂಬೇಡ್ಕರ್ ಜನ್ಮ ಶತಮಾನೋತ್ಸವ ವರ್ಷದ ಅಂಗವಾಗಿ ಕಳೆದ ವರ್ಷದ ಅಂಬೇಡ್ಕರ್ ಜನ್ಮ ದಿನದಂದು (೧೪-೪-೯೦) ಬೆಂಗಳೂರಿನಿಂದ ಹೊರಟಿರುವ ೧೫ ಜನ ಸೈಕಲ್ ಸವಾರರ "ಭೀಮ್ ಮಾರ್ಚ್" ಇದೇ ಫೆ. ೨೪ರಿಂದ ೨೭ರವರೆಗೆ ಶೃಂಗೇರಿ, ಕೊಪ್ಪ, ನ ರಾ. ಪುರ ತಾ||ಗಳಲ್ಲಿ ಸಂಚರಿಸಿತು.

ಈವರೆಗೆ ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ರಾಜ್ಯಗಳಲ್ಲಿ ಹಾಗೂ ಕೇರಳದ ಕಾಸರಗೋಡು ಜಿಲ್ಲೆಯ ಕೆಲವು ಭಾಗಗಳಲ್ಲಿ ಒಟ್ಟು ಸುಮಾರು ೫ ಸಾವಿರ ಕಿ.ಮೀ. ದೂರ ಕ್ರಮಿಸಿರುವ ಈ 'ಭೀಮ್ ಸೈನಿಕರ' ತಂಡದ ಜೊತೆ ೯ ವರ್ಷದ ಬಾಲಕ ಮಧು ಮತ್ತು ಆತನ ತಾಯಿ ಲಕ್ಷ್ಮಿ ಇವರುಗಳೂ ತಂತಮ್ಮ ಸೈಕಲ್‌ಗಳ ಮೇಲೆ ಅವಿರತವಾಗಿ ಪ್ರವಾಸದಲ್ಲಿದ್ದಾರೆ. ಲಕ್ಷ್ಮಿಯವರನ್ನು ವಿಧವಾ ಪುನರ್ವಿವಾಹ ಮಾಡಿಕೊಂಡಿರುವ ಎಂ. ಗೋಪಿನಾಥ್ ಅವರೇ ಈ ತಂಡದ ನಾಯಕರು. ಈ ದಂಪತಿಗಳಿಬ್ಬರೂ ತಂತಮ್ಮ ಉದ್ಯೋಗಗಳನ್ನು ತಾತ್ಕಾಲಿಕವಾಗಿ ಬಿಟ್ಟು ಬಂದಿದ್ದಾರೆ (ಗೋಪಿನಾಥ್ ಕೆಎಸ್ಎಫ್‌ಸಿಯ ಮಾಜಿ ಗೆಜೆಟೆಡ್ ಅಧಿಕಾರಿ). ತಂಡದ ಇತರರು ಕೂಡ ಒಂದು ವರ್ಷದ ಮಟ್ಟಿಗೆ ತಂತಮ್ಮ ಕೆಲಸವನ್ನು ಬಿಟ್ಟಿದ್ದು, ಈ ಸಾಹಸ ಯಾತ್ರೆ ಕೈಗೊಂಡಿದ್ದಾರೆ. ಅವರೆಲ್ಲರೂ [illegible] ತಾಲ್ಲೂಕಿನ ಯುವಕರು.

ಶೃಂಗೇರಿಯಿಂದ ಫೆ. ೨೫ ರ ಸಂಜೆ ಕೊಪ್ಪಕ್ಕಾಗಮಿಸಿದ ತಂಡವನ್ನು ಕೊಪ್ಪದಲ್ಲಿ ಮಂಡಲ ಪ್ರಧಾನರುಗಳಾದ [illegible] ಮತ್ತು [illegible] ಹಾಗೂ ತಹಸೀಲ್ದಾರ್ ಜಿ ಎಸ್. [illegible] [illegible]

[illegible]

(ಇನ್ನೂ ಇದೆ)

ಉಪಯುಕ್ತ ಜಾನುವಾರು ಚಿಕಿತ್ಸೆ ಶಿಬಿರ

ಹರಿಹರಪುರ: ಇಲ್ಲಿನ ಸಿಂಡಿಕೇಟ್ ಬ್ಯಾಂಕ್ ಶಾಖೆಯು ಯುನೈಟೆಡ್ ಇಂಡಿಯ ಇನ್ಶೂರೆನ್ಸ್ ಕಂಪೆನಿ ಮತ್ತು ಪಶು ವೈದ್ಯ ಇಲಾಖೆ ಸಹಯೋಗದೊಂದಿಗೆ ಜಾನುವಾರು ತಪಾಸಣೆ ಮತ್ತು ಸೇವಾ ಶಿಬಿರವೊಂದನ್ನು ಈಚೆಗೆ ಬೊಮ್ಲಾಪುರದಲ್ಲಿ ಏರ್ಪಡಿಸಿತ್ತು.

ಬ್ಯಾಂಕಿನ ಶಾಖಾ ಮ್ಯಾನೇಜರ್ ಬಿ. ರಮೇಶರಾವ್ ಉದ್ಘಾಟಿಸಿದ ಶಿಬಿರದಲ್ಲಿ ೯೦ ಜಾನುವಾರುಗಳ ತಪಾಸಣೆ ನಡೆಸಿ ಉಚಿತ ಚಿಕಿತ್ಸೆ ನೀಡಲಾಯಿತು.

ಉಪ ಪ್ರಧಾನ ಬಿ.ಕೆ. ಕೃಷ್ಣಶೆಟ್ಟರ ಅಧ್ಯಕ್ಷತೆಯಲ್ಲಿ ಸಂಜೆ ನಡೆದ ಮುಕ್ತಾಯ ಸಮಾರಂಭದಲ್ಲಿ, ಪಶುವೈದ್ಯರಾದ ಡಾ|| ಧರ್ಮಪ್ಪ, ಇನ್‌ಶೂರೆನ್ಸ್ ಸಂಸ್ಥೆಯ ಟಿ. ಆರ್. ಶ್ರೀನಿವಾಸ್, ಸಂಪತ್ ಕುಮಾರ್, ಕೃಷಿ ಸಹಾಯಕ ಮಂಜುನಾಥ್ ವಿವಿಧ ವಿಚಾರಗಳ ಮಾಹಿತಿ ನೀಡಿದರು. ಉತ್ತಮ ರಾಸುಗಳಿಗೆ ಬಹುಮಾನ ನೀಡಲಾಯಿತು. ಮಾಣಿಕ್ಯಸುಂದರಂ ಸ್ವಾಗತಿಸಿ, ರಮೇಶರಾವ್ ವಂದಿಸಿದರು.

ಜನರನ್ನು ಕಾಯಿಸಿ ಕೈಕೊಟ್ಟ ಶಾಸಕರು !

(ನಮ್ಮ ಪ್ರತಿನಿಧಿಯಿಂದ)

ಹಾಲ್ಮುತ್ತೂರು : ಫೆ. ೨೪ ರಂದು ಇಲ್ಲಿನ ಮಾಧ್ಯಮಿಕ ಶಾಲೆಯ ವಾರ್ಷಿಕೋತ್ಸವ ಸಮಾರಂಭಕ್ಕೆ ಮುಖ್ಯ ಅತಿಥಿಗಳನ್ನಾಗಿ ಶಾಸಕ ಶಾಮಣ್ಣ ಹಾಗೂ ಜಿ. ಪ. ಸದಸ್ಯೆ ಸುಮಿತ್ರಮ್ಮ ಇವರನ್ನು ಆಹ್ವಾನಿಸಲಾಗಿತ್ತು. (ಈ ಶಾಲೆಯ ಮುಖ್ಯೋಪಾಧ್ಯಾಯರು ಈ ಸಮಾರಂಭಕ್ಕೆ ಬರುವಂತೆ ಶಾಸಕರನ್ನು ಕೇಳಿಕೊಂಡಾಗ ೨೪ ರಂದು ಮಾತ್ರ ತಮಗೆ ಬರಲು ಸಾಧ್ಯ, ಬೇರೆ ದಿನ ಬರಲಿಕ್ಕಾಗುವುದಿಲ್ಲ ಎಂದು ತಿಳಿಸಿದ್ದರಂತೆ.)

ಆ ದಿನ ಈ ಊರಿನಲ್ಲಿ ಒಂದು ದೇವಸ್ಥಾನದ ವಾರ್ಷಿಕೋತ್ಸವ ಸಮಾರಂಭವಿದ್ದು ಜನರೆಲ್ಲಾ ಅತ್ತ ಹೋಗಬೇಕಿದ್ದಾಗ್ಯೂ ಸಹ ಕೇವಲ ಶಾಸಕರಿಗಾಗಿಯೇ ಆ ದಿನ ಶಾಲಾ ವಾರ್ಷಿಕೋತ್ಸವವನ್ನು ಇಟ್ಟುಕೊಂಡಿದ್ದಾಯ್ತು.

ಇದಕ್ಕೆ ಮತ್ತೊಂದು ಪ್ರಬಲ ಕಾರಣ ಎಂದರೆ ಹಿಂದಿನ ವರ್ಷ ಶಾಸಕರನ್ನು ಹಾಗೂ ಈ ಕ್ಷೇತ್ರದ ಜಿ. ಪ. ಸದಸ್ಯೆಯನ್ನು ವಾರ್ಷಿಕೋತ್ಸವಕ್ಕೆ ಆಮಂತ್ರಿಸದೇ ಇದ್ದುದರಿಂದ ತಾಲ್ಲೂಕ್ ಪಂಚಾಯ್ತಿ ಸಮಿತಿ ಸಭೆಯಲ್ಲಿ ಶಾಲೆಯ ಮುಖ್ಯೋಪಾಧ್ಯಾಯರನ್ನು ತೀವ್ರ ರೀತಿಯಲ್ಲಿ ತರಾಟೆಗೆ ತೆಗೆದುಕೊಳ್ಳಲಾಗಿತ್ತು. ಅದಕ್ಕಾಗಿಯೇ ಈ ವರ್ಷ ಅವರು ತಿಳಿಸಿದ ದಿನವೇ ಸಮಾರಂಭವನ್ನು ಏರ್ಪಡಿಸಲಾಗಿತ್ತು.

ಗೆದ್ದ ಮೇಲೆ ಎರಡನೇ ಬಾರಿ ಈ ಊರಿಗೆ (ಮೊದಲು ವಿಜಯೋತ್ಸವಕ್ಕೆ) ಆಗಮಿಸಲಿದ್ದ ಶಾಸಕರಿಗೆ ಊರಿನ ಕೆಲವಾರು ಸಮಸ್ಯೆಗಳ ಬಗ್ಗೆ ಮನವಿ ಸಲ್ಲಿಸಲು ಜನ ಕಾತರರಾಗಿ ಕಾಯುತ್ತಿದ್ದರು. ಆದರೆ ಶಾಸಕರು, ಜಿ. ಪ. ಸದಸ್ಯೆಯವರು ಈ ಸಭೆಗೆ ಬರಲೇ ಇಲ್ಲ. ಕಾದೂ ಕಾದೂ ಸುಸ್ತಾಗಿ ಕೊನೆಗೆ ಸ್ಥಳೀಯರನ್ನೇ ಮುಖ್ಯ ಅತಿಥಿಗಳನ್ನಾಗಿ ಕೂರಿಸಿ ಸಮಾರಂಭವನ್ನು ನಡೆಸಲಾಯ್ತು.

ಕಾರ್ಯಕ್ರಮಕ್ಕೆ ಬರಲಾಗುವುದಿಲ್ಲವೆಂದು ಶಾಸಕರಿಂದ ಮುಂಚಿತವಾಗಿ ಸೂಚನೆಯಾಗಲಿ, ಗೈರು ಹಾಜರಾದುದಕ್ಕೆ ವಿಷಾದ ಅಥವಾ ವಿವರಣೆಯಾಗಲಿ ಶಾಲೆಯ ಆಡಳಿತ ಮಂಡಳಿಗೆ ಬಂದಿಲ್ಲವೆನ್ನಲಾಗಿದೆ.

ನವೋದಯ ಸಂಸ್ಥೆಯ ವಾರ್ಷಿಕೋತ್ಸವ

ಶೃಂಗೇರಿ: ಈ ಸುತ್ತಮುತ್ತಲಿನ ಯುವತಿಯರ ಆಶಾಕಿರಣವಾದ, ಅವರಿಗೆ ಸಾಮಾಜಿಕ ಭದ್ರತೆಯನ್ನು ನೀಡುವುದರೊಂದಿಗೆ ಸಾಂಸ್ಕೃತಿಕ ಚೈತನ್ಯವನ್ನೂ ನೀಡುವತ್ತ ಬೆಳೆಯುತ್ತಿರುವ 'ನವೋದಯ ಶೈಕ್ಷಣಿಕ ಸಂಸ್ಥೆ'ಯ ವಾರ್ಷಿಕೋತ್ಸವವು ಫೆ. ೨೪ ರಂದು ನಡೆಯಿತು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಪರಿಷತ್ ಸದಸ್ಯ ಕೆ ವಿ. ರಾಮಪ್ಪಯ್ಯನವರು, ಈ ಸಂಸ್ಥೆಯ ರೂವಾರಿಯಾದ ಡಾ|| ಎಲ್ ಎಂ. ಭಟ್‌ರವರ ಕಾರ್ಯವನ್ನು ಶ್ಲಾಘಿಸಿ, ಈ ಸಂಸ್ಥೆ ಯೋಜಿಸಿರುವ ಸ್ವಂತ ಕಟ್ಟಡಕ್ಕೆ ಹಾಗೂ ಸರ್ಕಾರದ ಸಹಾಯದೊರೆತಲ್ಲಿ ಖಾದಿ ಭಂಡಾರ ಮತ್ತು ಮಹಿಳಾ ನ್ಯಾಯಬೆಲೆ ಅಂಗಡಿ ತೆರೆಯುವ ಉದ್ದೇಶಕ್ಕೆ ಜನತೆ ಮತ್ತು ಸರ್ಕಾರ ಪೂರ್ಣ ಸಹಕಾರ ನೀಡಬೇಕೆಂದರು

ಡಾ|| ಎಲ್ ಎಂ. ಭಟ್‌ರವರು ಸ್ಥಾಪಿಸಿರುವ ರತ್ನಮಂಜರಿ ವೈದ್ಯಕೀಯ ಸಲಹಾ ಕೇಂದ್ರವು ಮಲೆನಾಡಿನ ಜನತೆಗೆ ತಜ್ಞವೈದ್ಯರ ಕೊರತೆ ನೀಗಿಸಿರುವುದನ್ನು ಮುಖ್ಯ ಅತಿಥಿಗಳಾಗಿದ್ದ ವೈದ್ಯಾಧಿಕಾರಿ ಡಾ|| ಲಕ್ಷ್ಮೀ ನಾರಾಯಣ್ ಪ್ರಶಂಸಿಸಿದರು. ಮಂಡಲ ಪ್ರಧಾನ ಎಚ್.ಆರ್. ಕೃಷ್ಣಮೂರ್ತಿ ಇನ್ನೊಬ್ಬ ಮುಖ್ಯ ಅತಿಥಿಯಾಗಿದ್ದರು.

ಸಮಾರಂಭದ ನಂತರ ಸಂಸ್ಥೆಯ ಸದಸ್ಯೆಯರಿಂದ ವಿವಿಧ ಮನರಂಜನೆಗಳ ಕಾರ್ಯಕ್ರಮ ನಡೆಯಿತು

ಶೃಂಗೇರಿಯ ಸುತ್ತಮುತ್ತಲಿನ ಯುವತಿಯರನ್ನು ಹೊಲಿಗೆ, ನಿಟ್ಟಿಂಗ್, ಇನ್ನಿತರ ಕರಕುಶಲ ಕೆಲಸಗಳಲ್ಲಿ, ಗುಡಿ ಕೈಗಾರಿಕೆಯಲ್ಲಿ ತೊಡಗಿಸುವುದರೊಂದಿಗೆ, ಶೃಂಗೇರಿಯ ಸಾಂಸ್ಕೃತಿಕ ರಂಗದಲ್ಲಿ ಒಂದು ಹೊಸ ಅಲೆ ಸೃಷ್ಟಿಸಿದೆ ಈ ಸಂಸ್ಥೆ ಎಂದರೆ ತಪ್ಪಾಗಲಿಕ್ಕಿಲ್ಲ. ನವೋದಯ ಯುವತಿ ಮಂಡಳಿ ಪ್ರಸ್ತುತಪಡಿಸಿರುವ 'ಸಿಡಿದವಳು' ನಾಟಕ ಈ ಬಾರಿ ರಾಜ್ಯ ಮಟ್ಟದ ಯುವ ಮೇಳಕ್ಕೆ ಪ್ರವೇಶ ಗಿಟ್ಟಿಸಿರುವುದನ್ನು ಇಲ್ಲಿ ನೆನಪಿಸಬಹುದು. ಇಲ್ಲಿ ಗಮನಿಸಬೇಕಾದ ಒಂದು ಅಂಶವೆಂದರೆ, ಸುಪ್ತ ಪ್ರತಿಭೆಯನ್ನು ಒಳ್ಳೆಯ ರೀತಿಯಲ್ಲಿ, ಒಳ್ಳೆಯ ಕಲೆಗೆ ಬಳಸಿಕೊಳ್ಳಬೇಕೇ ವಿನಃ ಕಲೆಯನ್ನಾಗಲಿ, ಪ್ರತಿಭೆಯನ್ನಾಗಲಿ ಕೊಲ್ಲುವುದಕ್ಕಲ್ಲ. ಈ ರೀತಿಯ ತಪ್ಪುಗಳಾಗದಂತೆ ಇದರ ಮಾರ್ಗದರ್ಶಕರು ಗಮನ ಹರಿಸಲಿ.

(ವರದಿ : ವೈ ಗ. ಜಗದೀಶ್)

ಮಾ.೧೧-ಗ್ರಾ। ಸಹಾಯಕರ 'ವಿಧಾನಸೌಧ' ಚಲೊ

ಚಿಕ್ಕಮಗಳೂರು: ಬಹುಕಾಲದ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ರಾಜ್ಯದ ಎಲ್ಲೆಡೆಯ ಗ್ರಾಮ ಸಹಾಯಕರು ಮಾ. ೧೧ರಂದು 'ವಿಧಾನಸೌಧ ಚಲೋ' ನಡೆಸಿ, ಅಂದಿನಿಂದಲೇ ಬೇಡಿಕೆ ಈಡೇರುವವರೆಗೂ 'ಆಮರಣಾಂತ ಉಪವಾಸ ಸತ್ಯಾಗ್ರಹ' ನಡೆಸಲಿದ್ದಾರೆ.

ಬೀದಿ ನಾಟಕ ಸ್ಪರ್ಧೆ

ಭದ್ರಾವತಿ ಕಾಗದ ಕಾರ್ಖಾನೆಯ 'ಸವಿ ಕಲಾವಿದರು' ಕಳೆದ ಐದು ವರ್ಷಗಳಿಂದಲೂ, ನಾಡಿನ ಕಲೆ-ಕಲಾವಿದರನ್ನು ಗುರ್ತಿಸಿ ಪ್ರೋತ್ಸಾಹಿಸುವ ಹಲವು ಕಾರ್ಯಕ್ರಮಗಳನ್ನು ನಡೆಸುತ್ತಿದ್ದು, ಈ ಬಾರಿ ಮೊಟ್ಟ ಮೊದಲ ಬಾರಿಗೆ 'ರಾಜ್ಯ ಮಟ್ಟದ ಬೀದಿ ನಾಟಕಗಳ ಸ್ಪರ್ಧೆ' ಏರ್ಪಡಿಸಿದ್ದಾರೆ.

ಉತ್ತಮ ಪ್ರದರ್ಶನಗಳನ್ನು ನೀಡುವ ತಂಡಗಳಿಗೆ ಮತ್ತು ನಟ-ನಟಿ-ತಂತ್ರಜ್ಞರಿಗೆ ವಿವಿಧ ಬಹುಮಾನಗಳು ಮತ್ತು ಪಾರಿತೋಷಕಗಳನ್ನು ನೀಡಲಾಗುವುದು. ವಿವರಗಳಿಗೆ ವಿಳಾಸ : ವೈ. ಕೆ. ಹನುಮಂತಯ್ಯ, ಮನೆ ನಂ. ೧೦-೫೫೮, ಎ. ಎಸ್. ಟಿ, ಕಾಗದ ನಗರ, ಭದ್ರಾವತಿ.

ಪ್ರಬಂಧ ರಚನಾ ಕಮ್ಮಟ

ಹರಿಹರಪುರ : ಇಲ್ಲಿನ ಕಿರಿಯ ಕಾಲೇಜಿನಲ್ಲಿ ಫೆ. ೨೪ರಂದು ತಾ|| ಕ ಸಾ ಪ. ಆಶ್ರಯದಲ್ಲಿ ನಡೆದ ಕನ್ನಡ ಪ್ರಬಂಧ ರಚನಾ ಕಮ್ಮಟದಲ್ಲಿ ೫೨ ಜನ ಭಾಗವಹಿಸಿದ್ದರು. ಉದ್ಘಾಟಿಸಿದ ಪ್ರಿನ್ಸಿಪಾಲ್ ಎಸ್. ವಿ. ಅಡಿಗರು ಪ್ರಬಂಧದ ಮೂಲದ ಬಗ್ಗೆ ವಿವರಿಸಿದರು

ಪ್ರಬಂಧ ರಚನೆಯ ಬಗ್ಗೆ ಉಪನ್ಯಾಸಕರುಗಳಾದ ಶ್ರೀನಿವಾಸ್, ನಂಜುಂಡಶಾಸ್ತ್ರಿ ಮತ್ತು ಉಷಾದೇವಿ ಶಿಬಿರಾರ್ಥಿಗಳಿಗೆ ಮಾರ್ಗದರ್ಶನ ನೀಡಿ ಅವರುಗಳು ೪ ವಿಷಯಗಳ ಮೇಲೆ ಬರೆದ ಪ್ರಬಂಧಗಳನ್ನು ಪರಿಶೀಲಿಸಿ, ಸರಿಯಾದ ಬರವಣಿಗೆ ಬಗ್ಗೆ ಸಲಹೆ-ಸೂಚನೆಗಳನ್ನು ನೀಡಿದರು.

ತಾ|| ಕ. ಸಾ ಪ. ಅಧ್ಯಕ್ಷ ಕೆ.ಜಿ ಎಸ್. ಶಾಸ್ತ್ರಿ ಸ್ವಾಗತಿಸಿ, ಕಾರ್ಯದರ್ಶಿ ಅ. ನಾ. ಸೇರಿಗಾರ್ ವಂದಿಸಿದರು

(ವರದಿ : ಬಿ ಆರ್. ಕಿರಣ್)

ಗಳಗಂಡ ರೋಗದ ಬಗ್ಗೆ ಎಚ್ಚರಿಕೆ

ಕೊಪ್ಪ : ಜಿಲ್ಲೆಯ ಮಲೆನಾಡಿನ ಗ್ರಾಮಾಂತರ ಭಾಗಗಳಲ್ಲಿ ಶೇ. ೨೦ ರಿಂದ ೬೦ ರಷ್ಟು ಗಳಗಂಡ ರೋಗ ಕಂಡುಬಂದಿದ್ದು, ಸಾರ್ವಜನಿಕರು, ಮುಖ್ಯವಾಗಿ ಮಹಿಳೆಯರು ಮನೆ ಬಳಕೆಯಲ್ಲಿ ಆಯೋಡಿನ್ ಯುಕ್ತ ಉಪ್ಪನ್ನೇ ಬಳಸುವಂತೆ ಜಿಲ್ಲಾ ಆರೋಗ್ಯಾಧಿಕಾರಿ ಡಾ|| ಮುರುಗೇಂದ್ರಪ್ಪ ಮನವಿ ಮಾಡಿದರು.

ಇಲ್ಲಿ ಫೆ. ೨೧ ರಂದು ಗಳಗಂಡ ರೋಗದ ಬಗ್ಗೆ ಸ್ಥಳೀಯ ಸಂಘ-ಸಂಸ್ಥೆಗಳ ಸದಸ್ಯರ ಸಮಾವೇಶದಲ್ಲಿ ಅವರು ಮಾತನಾಡಿದರು. ಈ ರೋಗಕ್ಕೆ ತುತ್ತಾಗಿರುವ ಮಹಿಳೆಯೊಬ್ಬರನ್ನು ಸಭೆಗೆ ಕರೆತಂದು, ರೋಗದ ಬಗ್ಗೆ ಪ್ರತ್ಯಕ್ಷ ವಿವರಣೆ ನೀಡಿದ ಡಾ|| ಎಂ. ಜಿ. ಪ್ರಸಾದ್, ಆಯೋಡಿನ್ ಯುಕ್ತವಲ್ಲದ ಉಪ್ಪನ್ನು ಯಾರಾದರೂ ಮಾರುವುದು ಕಂಡು ಬಂದಲ್ಲಿ ತಮ್ಮ ಗಮನಕ್ಕೆ ತರಬೇಕೆಂದೂ, ಆ ಬಗ್ಗೆ ತಕ್ಕ ಕ್ರಮ ಕೈಗೊಳ್ಳಲಾಗುವುದೆಂದೂ ತಿಳಿಸಿದರು.

ಶಾಸಕ ಶಾಮಣ್ಣನವರ ಅಧ್ಯಕ್ಷತೆಯಲ್ಲಿ ಬಿ ಎಲ್. ರಾಮದಾಸ್ ಕಾರ್ಯಕ್ರಮ ಉದ್ಘಾಟಿಸಿದರು. ಬಿ. ಜಿ. ಚಿದಂಬರ್ ಮುಖ್ಯ ಅತಿಥಿಯಾಗಿದ್ದರು.

ಮಹಿಳೆಯರು ಸಾಕಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರಾದರೂ, ಎಲ್ಲರಿಗೂ ಉಪ್ಪನ್ನು ಮಾರುವ ವ್ಯಾಪಾರಿಗಳೊಬ್ಬರೂ ಹಾಜರಿರದಿದ್ದುದು ಕೊರತೆಯಾಗಿ ಕಂಡಿತು.

(ವರದಿ : ವಸಂತ್‌ಕುಮಾರ್ ಹಡಿ[illegible])

'ಭೀಮ್ ಮಾರ್ಚ್' ಸೈಕಲ್ ಜಾಥಾ

(ಹಿಂದಿನ ಪುಟದಿಂದ)

ವಿದ್ಯಾರ್ಥಿ-ವಿದ್ಯಾರ್ಥಿನಿಯರೂ ಒಂದೇ ಒಂದು ಪ್ರಶ್ನೆಯನ್ನೂ ಕೇಳಲಿಲ್ಲ!

ಸರ್ಕಾರದ ಅಥವಾ ಬೇರಾವುದೇ ಸಂಸ್ಥೆಯ ಹಣಕಾಸಿನ ನೆರವೇನೂ ಇಲ್ಲದೆ, ಕೇವಲ ಸಮಾಜದ ಆರೋಗ್ಯಕರ ಮಾರ್ಪಾಡನ್ನು ಬಯಸುವ ಹಿತೈಷಿಗಳ ದೇಣಿಗೆಯಿಂದಲೂ, ಅಲ್ಲಲ್ಲಿನ ಸ್ಥಳೀಯ ಜನತೆಯ ನೆರವಿನಿಂದಲೂ ನಡೆದು ಬಂದಿರುವ ಈ ಜಾಥಾ ಮಾ. ೧೧, ೧೨ ರಂದು ಬೆಂಗಳೂರಿನಲ್ಲಿ ಏರ್ಪಡಾಗಿರುವ ಸಮಾವೇಶವೊಂದರಲ್ಲಿ ಕೊನೆಗೊಳ್ಳುತ್ತದೆ.

ಹಾಡುಗಳು, ಬೀದಿ ನಾಟಕಗಳು ಮತ್ತಿತರ ಸಾಂಸ್ಕೃತಿಕ ಕಾರ್ಯಕ್ರಮಗಳ ನಡುನಡುವೆ ಪುಟ್ಟದಾದ ವಿವರಣೆಗಳು-ಇವುಗಳ ಮೂಲಕ ಹೋದೆಡೆಯಲ್ಲೆಲ್ಲ ದಲಿತ ಮತ್ತು ಹಿಂದುಳಿದ ಜಾತಿಗಳ ಹಾಗೂ ಇತರ ದುಡಿವ ವರ್ಗಗಳ ಜನತೆಯಲ್ಲಿ ಸ್ವಾವಲಂಬನೆ ಮತ್ತು ಹೋರಾಟದ ವಿಚಾರಗಳನ್ನೂ, 'ಮೇಲು ಜಾತಿ'ಗಳವರಲ್ಲಿ ಸಾಮಾಜಿಕ ಅರಿವನ್ನೂ ಬಿತ್ತಲು ಜಾಥಾ ಪ್ರಯತ್ನಿಸುತ್ತಿದೆ.

ಅಡಿಕೆ ಧಾರಣೆ

ಶಿವಮೊಗ್ಗ ೨-೩-೯೧

ಸರಕು : ೭೬೦೯-೭೩೦೯
ಚಿಟ್ಟೆ : ೫೬೪೯-೬೩೦೯
ಗೊರಬಲು : ೩೪೧೧-೩೮೭೧

ಸಾಗರ ೨ ೩-೯೧

ಆಪಿ : ೫೯೯೯-೭೭೦೯
ರಾಶಿ ಇಡಿ : ೫೦೯೦-೫೭೯೯
ಚಾಲಿ : ೪೮೭೯-೫೧೭೯
ಸಿಪ್ಪೆ ಗೋಟು : ೩೨೪೯-೨೭೩೯

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: [illegible] ಮುದ್ರಣ : ದೀಪಶಿಖೆ ಅಚ್ಚುಕೂಟ, ಕೊಪ್ಪ